Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD
ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 37
ದಿನಾಂಕ: 17.03.2026


Rtn. Francesco Arezzo
R.I. President


Rtn. K. Palaksha
District Governor


Rtn. Anil Kumar
President


Rtn. Krishnappa
Secretary

# RC Aisiri, RC Manipal and RC Katapady Unite for Good on Water, Sanitation, and Hygiene

## A Note on Water and Sanitation


Rtn. MPHF. Dr. A. Ganesha
Zonal Learning Facilitator
Zone 4, Rotary District 3182

*"A step to conserve water is the step to secure the future.... A drop of water is worth more than a sack of gold for the thirsty man"*

WATER is one of the natural renewable resources which we have on the planet Earth and SANITATION indicates the cleanliness. Both can be considered as two faces of a coin.

Water is termed as **Jeevan** (i.e. life) in Sanskrit. Every one of us know the importance of water and hence one need to maintain sanctity of the resource. Rain is the chief source of water for both surface and underground water.

Our present throw-away style of living leads to pollute the sources of this noble resource to the extent that WATER as become **W**ater-**A**s – **T**he – **E**ndangered - **R**esource!

Water Conservation includes all that measures to save water. In other words, it is the judicious use of water. When the water availability in a country drops below 1700 cu.m. per capita per year it is called "Water Stress", If it falls below 1000 cu.m. it said to be "Water Scarcity", If it falls below 500 cu.m. it is the state of "Absolute Scarcity".

Thus, in the present scenario of increasing demand for water, the conservation of water is




the only solution to manage the available water resource.

Water Conservation measures include the Sustainable water Management Practices – micro level (i.e. domestic level) and macro level practices (i.e. in agricultural, industrial, institutional and community level). Moreover, with respect water conservation, role of an Individual is more significant. Our personal actions can either worsen or improve our environmental quality.

Domestically use water by **VED** principle,

- use for **Vital** activities
- control for **Essential** activities
- cut down for **Desirable** activities.

Kindly note that celebration of **World Water Day** (22 March) is an annual United Nations observance since 1993 focusing on the importance of fresh Water with a yearly theme.

This year's theme is **Water and Gender** to center women and girls in water solutions because


*contd..2.*

*From pg.1..*

"**Where water flows equality grows**".

The theme 'Water and Gender', focusing on safe water and sanitation as human rights and critical enablers of gender equality. The campaign explains that the global water crisis affects everyone, but not equally. Where people lack the human rights to safe drinking water and sanitation, inequalities flourish, with women and girls bearing the brunt.


World Water Day 2026 is about centering women and girls in water solutions – calling for a transformative, rights-based approach to solving the water crisis, where women's and girls' voices, leadership and agency are fully recognized.




Wastewater/used water, sewage (liquid waste produced from the community), storm water (rain water) and Industrial effluent needs immediate action under sanitation. Accumulation leads to decomposition, may contain pathogens, nutrients, toxic matters. Hence calls for immediate & nuisance free removal from the source, followed by treatment and disposal. One of the sustainable water Management Practices include **Reduce, Reuse, Recycle and Recover.**

Thank you and wishing a happy **World Water Day** in advance.

**Rtn. MPHF. Dr. A. Ganesha**
Zonal Learning Facilitator
Zone 4, Rotary District 3182




"ನನ್ನ ಮೂರು ರೋಟರಿ ಕ್ಲಬ್ ಗಳಾದ ರೋಟರಿ ಐಸಿರಿ ಪರ್ಕಳ, ರೋಟರಿ ಕ್ಲಬ್ ಮಣಿಪಾಲ ಮತ್ತು ರೋಟರಿ ಕ್ಲಬ್ ಕಟಪಾಡಿಯ ಈ ವಿಶೇಷ ಸಂಗಮ ಬಹಳ ಸಂತಸ ತರುತ್ತಿದೆ. ತಮ್ಮದೇ ಆದ ಶೈಲಿಯಲ್ಲಿ ಸಮಾಜಮುಖಿ ಕಾರ್ಯಗಳನ್ನು ಮಾಡುವ ಈ ಮೂರು ಕ್ಲಬ್ ಗಳು ಯಶಸ್ವೀ ಕ್ಲಬ್ ಗಳು. ಕಟ್ಪಾಡಿ ಕ್ಲಬ್ ನ ಸದಸ್ಯರ ಒಡನಾಟ, ಬಾಂಧವ್ಯ, ಸದಾ ಸ್ವಾಗತಾರ್ಹ. ಮಣಿಪಾಲ ಕ್ಲಬ್ ನ ಸದಸ್ಯರು ನನ್ನನ್ನು ವಿನಯಪೂರ್ವಕವಾಗಿ ನಡೆಸಿಕೊಂಡು ತಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ನೀಡುತ್ತ ಬಂದಿದ್ದಾರೆ. ರೋಟರಿ ಐಸಿರಿ ಪರ್ಕಳ ನನ್ನ ಹೋಮ್ ಕ್ಲಬ್. ಅಲ್ಲಿ ನಾನು ಸದಾ ವಿದ್ಯಾರ್ಥಿ. ರೋಟರಿಯ ಆಳ ಎತ್ತರಗಳನ್ನು ನಾನು ಕಲಿಯುತ್ತಿರುವುದೇ ಐಸಿರಿಯ ಅಂಗಣದಿಂದ.

ಅನುಭವೀ ಸದಸ್ಯರು, ಉತ್ತಮ ಕಾರ್ಯಕ್ರಮಗಳು ಮತ್ತು ಸಹೃದಯಿ ಸದಸ್ಯರು ಈ ಮೂರು ಕ್ಲಬ್ ಗಳ ವಿಶೇಷತೆಯಾಗಲಿ ಎಂದು ಆಶಿಸುತ್ತೇನೆ."



**Rtn. PHF. Smitha G Kamath**
Zonal Lieutenant
Zone 4, Rotary District 3182

**ರೊ. PHF. ಸ್ಮಿತಾ ಕಾಮತ್**
**ವಲಯ ಸೇನಾನಿ,**
ವಲಯ 4, ರೋಟರಿ ಜಿಲ್ಲೆ 3182

## **ಬೌದ್ಧಿಕ ಸಿರಿ** *ವರ್ತನೆಯೇ ಪರಿಚಯವಾದಾಗ !*

ಇಂದಿನ ಮುಖ್ಯ ಅತಿಥಿಯವರಾದ ಡಾ. ನಾರಾಯಣ ಶೆಣೈಯವರ ಕಚೇರಿಗೆ ನಾನು ಕೆಲವು ವರ್ಷಗಳ ಹಿಂದೆ ಹೋದಾಗ, ನನ್ನನ್ನು ಆಕರ್ಷಿಸಿದ್ದು, ಲಾಬಿಯಲ್ಲಿ ನೇತುಹಾಕಿದ್ದ ಒಂದು ಫಲಕ. ಅದರಲ್ಲಿ "Your behaviour is your introduction" ಎಂದಿತ್ತು !

ಹೌದು, ಮಾನವನ ಜೀವನದಲ್ಲಿ ಅವನ ಮಾತುಗಳಿಗಿಂತಲೂ ಅವನ ವರ್ತನೆಗೆ ಹೆಚ್ಚಿನ ಮಹತ್ವವಿದೆ. "**ನನ್ನ ವರ್ತನೆಯೇ ನನ್ನ ಪರಿಚಯ**" ಎಂಬ ಮಾತು ಇದನ್ನೇ ಸ್ಪಷ್ಟವಾಗಿ ಹೇಳುತ್ತದೆ.

ನಾವು ನಮ್ಮನ್ನು ಪರಿಚಯಿಸಿಕೊಳ್ಳಲು ಹಲವಾರು ಉತ್ತಮ ಪದಗಳನ್ನು ಬಳಸಬಹುದು, ಆದರೆ ನಮ್ಮ ನಿಜವಾದ ಸ್ವಭಾವವನ್ನು ಜಗತ್ತಿಗೆ ಪರಿಚಯಿಸುವುದು ನಮ್ಮ ವರ್ತನೆಯೇ ಆಗಿದೆ.

ಒಬ್ಬ ವ್ಯಕ್ತಿ ಹೇಗೆ ಮಾತನಾಡುತ್ತಾನೆ, ಇತರರನ್ನು ಹೇಗೆ ಗೌರವಿಸುತ್ತಾನೆ, ಕಷ್ಟದ ಸಂದರ್ಭಗಳಲ್ಲಿ ಹೇಗೆ ಪ್ರತಿಕ್ರಿಯಿಸುತ್ತಾನೆ ಎಂಬುದರಿಂದ ಅವನ ವ್ಯಕ್ತಿತ್ವ ತಿಳಿಯುತ್ತದೆ.

ಒಳ್ಳೆಯ ವರ್ತನೆ ಇರುವವರು ಎಲ್ಲೆಡೆ ಗೌರವ ಮತ್ತು ವಿಶ್ವಾಸವನ್ನು ಗಳಿಸುತ್ತಾರೆ. ಮಾತಿನಲ್ಲಿ ಮಧುರತೆ, ಇತರರ ಬಗ್ಗೆ ಕಾಳಜಿ, ಶಿಸ್ತಿನ ನಡೆ – ಇವು ಒಬ್ಬ ವ್ಯಕ್ತಿಯನ್ನು ವಿಶಿಷ್ಟನನ್ನಾಗಿಸುತ್ತವೆ.

ಅದೇ ಸಮಯದಲ್ಲಿ, ಕೆಟ್ಟ ವರ್ತನೆ ಇದ್ದರೆ ಎಷ್ಟು ಜ್ಞಾನ ಅಥವಾ ಸಂಪತ್ತು ಇದ್ದರೂ ಜನರು ದೂರವಾಗುತ್ತಾರೆ.

ಕೊನೆಗೆ ಹೇಳುವುದಾದರೆ, ನಮ್ಮ ಹೆಸರು ಅಥವಾ ಹುದ್ದೆ, ವಸ್ತ್ರಾಭರಣಕ್ಕಿಂತಲೂ, ನಮ್ಮ ಹಾವ–ಭಾವ, ನಡೆ–ನುಡಿ, ಮಾತು–ಕೃತಿ ಮುಂತಾದ ನಮ್ಮ ವರ್ತನೆಯೇ ನಮ್ಮ ನಿಜವಾದ ಪರಿಚಯವಾಗಿರುತ್ತದೆ.

ಆದ್ದರಿಂದ ಮನುಷ್ಯನ ನಿಜವಾದ ಪರಿಚಯ ಅವನ ವರ್ತನೆಯಲ್ಲಿ ಇದೆ. "ನನ್ನ ವರ್ತನೆ ನನ್ನ ಪರಿಚಯ" ಎಂಬ ಮಾತು ಉತ್ತಮವಾದಂತಹ ಜೀವನಕ್ಕೆ ಬಹಳಷ್ಟು ಅರ್ಥಪೂರ್ಣವೆನಿಸುತ್ತದೆ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಮಾರ್ಚ್ 10ರ ಸಭೆಯ ಛಾಯಾಚಿತ್ರಗಳು
















## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 34ನೇ ವಾರದ ಸಭೆ 10/3/2026 ರಂದು RCC ಕಾರ್ಯಾಲಯದಲ್ಲಿ ಜರುಗಿತು. ರೊ. ಡಾ. ಎ. ಗಣೇಶ್ ಅವರು ಪ್ರಾರ್ಥನೆ ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಪೂರ್ವಾಧ್ಯಕ್ಷರಾದ ರೊ. ಸ್ಮಿತಾ ಜಿ. ಕಾಮತ್ ಅವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ಜೀವನ ಸಿರಿ ಸರಣಿ ಕಾರ್ಯಕ್ರಮದಡಿ ಸಭೆಯ ಅತಿಥಿಯಾಗಿ ಆಗಮಿಸಿದ ಐಸಿರಿಯ ಹಿರಿಯ ಸದಸ್ಯರಾದ ರೊ. ಡಾ. ಪ್ರಭಾಕರ್ ಯು. ರೆಂಜಾಳ ಅವರು ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡರು. ತಮ್ಮ ಬಾಲ್ಯದ ಕಷ್ಟದ ದಿನಗಳು, ವಿದ್ಯಾಭ್ಯಾಸ, ವೈದ್ಯಕೀಯ ವೃತ್ತಿ, ಪ್ರಾಧ್ಯಾಪನದ ಅನುಭವ ಹಾಗೂ ತಮ್ಮ ವಯಕ್ತಿಕ ಜೀವನದ ಮಜಲುಗಳನ್ನು ನಮ್ಮೊಂದಿಗೆ ಹಂಚಿಕೊಂಡರು.

ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಡಾ. ಪ್ರಭಾಕರ್ ಯು. ರೆಂಜಾಳ ಅವರು ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಅವರು ಸಹಕರಿಸಿದರು.

ರೊ. ರಾಜೇಶ್ ಡಿ. ಶೆಣೈ ಅವರು ತಮ್ಮ ಈ ವಾರದ ಬುಲೆಟಿನ್ ನ ವಿಶೇಷತೆ ಮತ್ತು ಅದು ಪಡೆಯುತ್ತಿರುವ ಪ್ರಸಿದ್ಧಿಯ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಈ ಬುಲೆಟಿನ್ ತಯಾರಿಯಲ್ಲಿ ತನಗೆ ಸಿಕ್ಕಿದ ಅನುಭವವನ್ನು ಹಂಚಿಕೊಂಡರು.

ರೊ. ಪ್ರಕಾಶ್ ಶೆಣೈ ಅವರು ಪ್ರತೀ ವಾರ ನಡೆಯುತ್ತಿರುವ classification talk ಉತ್ತಮವಾಗಿ ಮೂಡಿ ಬರುತ್ತಿದೆ ಎಂದರು.

ರೊ. ಮಂಜುನಾಥ್ ಉಪಾಧ್ಯ ಅವರು ಮುಂದಿನ ಸಾಲಿನ ಅಧ್ಯಕ್ಷ ಕಾರ್ಯದರ್ಶಿ ಅವರಿಗೆ ಮಾರ್ಗದರ್ಶನದ ಮಾತುಗಳನ್ನು ಆಡಿದರು.

ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಐಸಿರಿಯು ಬೆಳೆಯುತ್ತಿರುವ ರೀತಿಯನ್ನು ಅಭಿನಂದಿಸಿದರು.

ರೊ. ಸುದರ್ಶನ ಪೈ ಅವರು ರೊ. ಡಾ. ರೆಂಜಾಳ ಅವರ ಅನುಭವದ ಮಾತುಗಳನ್ನು ಮೆಚ್ಚಿಕೊಂಡರು.

ಬ್ರಹ್ಮ ಶ್ರೀನಾರಾಯಣ ಗುರು ಸೇವಾ ಸಂಘದ ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಹಾಗೂ ಕೋಶಾಧಿಕಾರಿಯವರು ಐಸಿರಿಯ ಸಭೆಗೆ ಆಗಮಿಸಿ ನೂತನವಾಗಿ ನಿರ್ಮಾಣಗೊಂಡಿರುವ ಸಭಾಭವನದ ಉದ್ಘಾಟನೆಯ ಆಮಂತ್ರಣವನ್ನು ನೀಡಿದರು. ಅವರನ್ನು ಗುರುತಿಸಲಾಯಿತು.

ರೊ. ಸುನಿಲ್ ಅವರು ರೊ. ಡಾ. ರೆಂಜಾಳ ಅವರ ಜೀವನಾನುಭವದ ಮಾತುಗಳನ್ನು ಪ್ರಶಂಸಿಸಿದರು. ಕಳೆದ ವಾರದ ಜಂಟಿ ಸಭೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ರೊ. ಡಾ. ರೆಂಜಾಳ ಅವರ ಜೀವನದ ಶಿಸ್ತು ಮತ್ತು ಛಲವನ್ನು ಗೌರವಿಸಿದರು. ತಮ್ಮ ಮುಂದಿನ ವರ್ಷದ ವಲಯ ಹಾಗೂ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ರೊ. ಸ್ಮಿತಾ ಜಿ. ಕಾಮತ್ ಅವರು ರೋಟರಿ ಸಭೆಯನ್ನು ನಡೆಸುವ ಬಗ್ಗೆ ಮುಂದಿನ ಸಾಲಿನ ಅಧ್ಯಕ್ಷರಿಗೆ ಸಲಹೆ ನೀಡಿದರು. ಮುಂದಿನ ವಾರದಲ್ಲಿ ನಡೆಯಲಿರುವ ಮೂರು ಕ್ಲಬ್ ಗಳ ಜಂಟಿ ಸಭೆಯ ಬಗ್ಗೆ ಮಾಹಿತಿ ನೀಡಿದರು. ತಮ್ಮ ಜೀವನದ ಯಶೋಗಾಥೆಯನ್ನು ಹಂಚಿಕೊಂಡ ರೊ. ಡಾ. ರೆಂಜಾಳ ಅವರನ್ನು ಗುರುತಿಸಿ ಗೌರವಿಸಿದರು.

ಅದೃಷ್ಟಶಾಲಿ ವ್ಯಕ್ತಿಯ ಆಯ್ಕೆಯನ್ನು ರೊ. ಡಾ. ಪ್ರಭಾಕರ್ ಯು. ರೆಂಜಾಳ ಅವರು ನಡೆಸಿದರು. ರೊ. ಡಾ. ಎ. ಗಣೇಶ್ ಅವರು ಅದೃಷ್ಟಶಾಲಿಯಾಗಿ ಆಯ್ಕೆಗೊಂಡರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 36ನೇ ಸಂಚಿಕೆ ಬಿಡುಗಡೆ




ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಸಾಪ್ತಾಹಿಕ ಸಂಚಿಕೆ "ಐಶ್ವರ್ಯ"ದ ಮೂವತ್ತಾರನೇ ಸಂಚಿಕೆಯನ್ನು, ರೊ. ಡಾ. ಪ್ರಭಾಕರ್ ಯು. ರೆಂಜಾಳ ಅವರು 10/03/26ರಂದು ಬಿಡುಗಡೆಗೊಳಿಸಿದರು.




ರೋಟರಿ ಐಸಿರಿ ಮತ್ತು ರೋಟರಿ ಕ್ಲಬ್ ಮಣಿಪಾಲ ಟೌನ್ ಒಂದಾಗಿ ಮಾರ್ಚ್ 3ನೇ ತಾರೀಕಿನಂದು ನಡೆಸಿದ ಜಂಟಿ ಸಭೆಯಲ್ಲಿ 27/02 ರಂದು ಹುಟ್ಟುಹಬ್ಬ ಆಚರಿಸಿದ ರೊ. ವೆಂಕಟೇಶ ಭಟ್ ಕೆ.ಎಮ್. ಅವರನ್ನು ಶಾಲು ಹೊದೆಸಿ ಗೌರವಿಸಲಾಯಿತು.